ತಂತಿ: "ಯುನಿಕರ್ನಾಟಕ"
Tel. : "UNIKARNATAK"

ದೂರವಾಣಿ:(0836)2215374
Phone :(0836)2215374

# ಕರ್ನಾಟಕ ವಿಶ್ವವಿದ್ಯಾಲಯ
# KARNATAK UNIVERSITY
# DHARWAD

NAAC Accredited with "A" Grade
University with Potential for Excellence

LEGAL-CELL
ಕಾನೂನು ಕೋಶ

ಪಾವಟೆ ನಗರ, ಧಾರವಾಡ-580003
Pavate Nagar, Dharwad-580003

ಅನಂ.ಕವಿವಿ/ಕಾಕೋ/2017/8

ದಿನಾಂಕ: 15 JUN 2017

## ಸುತ್ತೋಲೆ

**ವಿಷಯ:** ಮಾಹಿತಿ ಹಕ್ಕು ಅಧಿನಿಯಮ ಕಲಂ 6(1)ರಡಿ ಮಾಹಿತಿ ಕೋರಿ ಸಲ್ಲಿಸಿದ ಅರ್ಜಿದಾರರಿಂದ ದೃಢೀಕರಿಸಿದ ಗುರುತಿನ ಹಾಗೂ ವಿಳಾಸ ಪುರಾವೆ ಪಡೆಯುವ ಕುರಿತು

**ಉಲ್ಲೇಖ:** ಸಿಂಡಿಕೇಟ್ ಠರಾವು ಸಂಖ್ಯೆ 17 ದಿನಾಂಕ 18 ಮೇ 2017

ಮಾಹಿತಿ ಹಕ್ಕು ಅಧಿನಿಯಮದ ಕಲಂ 6(1) (ಸಂಕ್ಷಿಪ್ತವಾಗಿ-ಅಧಿನಿಯಮ) ಪ್ರಕಾರ ಯಾವದೇ ವ್ಯಕ್ತಿ ಮಾಹಿತಿ ಕೋರಿ ಅರ್ಜಿ ಸಲ್ಲಿಸಬೇಕಾದಲ್ಲಿ ಅಂಥ ವ್ಯಕ್ತಿ ಅಸ್ತಿತ್ವದಲ್ಲಿರಬೇಕಾಗುತ್ತದೆ. ಅರ್ಜಿದಾರರ ಗುರುತಿನ ಬಗ್ಗೆ ಬಹಿರಂಗವಾದಾಗ ಮಾತ್ರ ಅಂಥಹ ವ್ಯಕ್ತಿಯ ಅಸ್ತಿತ್ವವನ್ನು ನಾವು ತಿಳಿದುಕೊಳ್ಳಬಹುದು. ವಿಶ್ವವಿದ್ಯಾಲಯವು ಪೂರೈಸಿದ ಮಾಹಿತಿಯು ಅರ್ಜಿದಾರರಿಗೆ ಮಾತ್ರ ತಲುಪುವಂತೆ ಖಚಿತಪಡಿಸಿಕೊಳ್ಳಲು ಅರ್ಜಿದಾರರ ಗುರುತು ಹಾಗೂ ವಿಳಾಸ ಪುರಾವೆ ಪಡೆಯುವುದು ಅವಶ್ಯವಿರುತ್ತದೆ. ಆಗ ಮಾತ್ರ ಪೂರೈಸಿದ ಮಾಹಿತಿಯು ಅರ್ಜಿದಾರರಿಗೆ ಸರಿಯಾದ ವಿಳಾಸವನ್ನು ತಲುಪಲು ಸಾಧ್ಯ.

ಈ ಕಾರಣ ಅಧಿನಿಯಮದ ಕಲಂ 6(1)ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಉಲ್ಲೇಖಿತ ಸಿಂಡಿಕೇಟ ಠರಾವುನನ್ವಯ ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಗಳು / ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅರ್ಜಿದಾರರಿಂದ ಅರ್ಜಿ ಸ್ವೀಕರಿಸಿದ ಕೂಡಲೇ ಗುರುತಿನ ಹಾಗೂ ವಿಳಾಸದ ಧೃಢೀಕರಿಸಿದ ಪುರಾವೆಗಳನ್ನು ಪಡೆದು ಮಾಹಿತಿ ಪೂರೈಸುವ ಕುರಿತಂತೆ ಕ್ರಮ ವಹಿಸಬೇಕೆಂದು ಈ ಮೂಲಕ ಕೇಳಿಕೊಳ್ಳಲಾಗಿದೆ.

ಮುಂದುವರೆದು ಅಧಿನಿಯಮದಡಿ ನಿಗದಿಪಡಿಸಿದ ಅವಧಿಯೊಳಗೆ ಮಾಹಿತಿ ಪೂರೈಸಲು ಮುತುವರ್ಜಿ ವಹಿಸಬೇಕೆಂದು. ಹಾಗೂ ಯಾವುದಾದರೂ ಸರ್ಟಿಫಿಕೇಟ್ / ಅಂಕಪಟ್ಟಿ ಮುಂತಾದ ದಾಖಲೆಗಳನ್ನು ಪೂರೈಸುವ ಸಂಧರ್ಭದಲ್ಲಿ "ಮಾಹಿತಿ ಹಕ್ಕು ಅಧಿನಿಯಮದಡಿ ಪೂರೈಸಿದೆ" ಎಂಬ ಶಿರೋನಾಮೆಯನ್ನು ನಮೂದಿಸಬೇಕೆಂದೂ ಸಹ ಸೂಚಿಸಲಾಗಿದೆ. ಇದಲ್ಲದೇ ಮಾಹಿತಿ ಪೂರೈಸುವಾಗ ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ ಇವರು ಮೇಲ್ಮನವಿ ಪ್ರಾಧಿಕಾರಿಗಳಾಗಿರುತ್ತಾರೆಂದು ಅವರ ದೂರವಾಣಿ, ಇಮೇಲ್ ಮಾಹಿತಿಯನ್ನೊಳಗೊಂಡಂತೆ ನಮೂದಿಸುವುದು ಅಧಿನಿಯಮದಡಿ ಆಗತ್ಯವಿದೆ.

ಕುಲಸಚಿವರು
15/6

**ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

1) ಎಲ್ಲ ಆಡಳಿತ ವರ್ಗ/ ಶೈಕ್ಷಣಿಕ/ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು/ ನಿರ್ದೇಶಕರು/ಸಂಯೋಜಕರು/ವಿಶೇಷಾಧಿಕಾರಿಗಳು/ ಕ್ಷೇಮಪಾಲಕರು/ಆಡಳಿತಾಧಿಕಾರಿಗಳು, ಕವಿವಿ ಧಾರವಾಡ.
2) ಕವಿವಿ ಘಟಕ ಮಹಾವಿದ್ಯಾಲಯಗಳು/ ಆಡಳಿತಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರಗಳು – ಕಾರವಾರ, ಹಾವೇರಿ ಮತ್ತು ಗದಗ.
3) ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ವಿಭಾಗ, ಕವಿವಿ ಧಾರವಾಡ ಇವರ ಮಾಹಿತಿಗಾಗಿ ಹಾಗೂ ಸುತ್ತೋಲೆಯ ಸ್ಕ್ಯಾನಿಂಗ್ ಮಾಡಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

**ಪ್ರತಿ ಮಾಹಿತಿಗಾಗಿ:**

1) ಕುಲಪತಿಗಳ ಆಪ್ತಕಾರ್ಯದರ್ಶಿಗಳು, ಕವಿವಿ ಧಾರವಾಡ.
2) ಕುಲಸಚಿವರ ಆಪ್ತಸಹಾಯಕರು, ಕವಿವಿ ಧಾರವಾಡ.
3) ಆಪ್ತಸಹಾಯಕರು, ಕುಲಸಚಿವರು (ಮೌಲ್ಯಮಾಪನ) ಕವಿವಿ ಧಾರವಾಡ.
4) ಹಣಕಾಸು ಅಧಿಕಾರಿಗಳ ಆಪ್ತಸಹಾಯಕರು, ಕವಿವಿ ಧಾರವಾಡ.